ಜೆಎಸ್‌ಎಸ್ ಮಹಾವಿದ್ಯಾಪೀಠ

## ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

ESTD-1964

ಪ್ರಚ್ಛನ್ನ ಉತ್ಕೃಷ್ಟತಾ•ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

**ಊಟಿ ರಸ್ತೆ, ಮೈಸೂರು – ೫೭೦ ೦೨೫**

☎: 0821-2548236 & 2548380 Fax: 0821-2548238 E-mail: jssautonomous@gmail.com www.jsscacs.edu.in

ದಿನಾಂಕ : 30/3/2013

ಪ್ರಕಟಣೆಯ ಕೃಪೆಗಾಗಿ

### ಭಾವನಾತ್ಮಕ ಸಂಬಂಧ ಬೆಸೆಯುವಲ್ಲಿ ಹಿಂದಿಯ ಪಾತ್ರ ಮಹತ್ವಪೂರ್ಣವಾದದ್ದು

–ಡಾ. ತಿಪ್ಪೇಸ್ವಾಮಿ

ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಹಿಂದಿ ಬಳಕೆಯಲ್ಲಿದೆ. ಅಂತೆಯೇ ಕಾಶ್ಮೀರದಿಂದ ಕನ್ಯಾಕುಮಾರಿಯರೆಗೆ ನಾನಾ ಸಂಸ್ಕೃತಿಗಳು ನೆಲೆಸಿವೆ. ಅವುಗಳೊಳಗೆ ಏಕತೆಯೊಂದನ್ನು ತರುವ ಸಾಮರ್ಥ್ಯ ಹಿಂದಿಗಿದೆ ಎಂಬ ಅಂಶವನ್ನು ನಿವೃತ್ತ ಪ್ರಾಧ್ಯಾಪಕರಾದ ಡಾ. ತಿಪ್ಪೇಸ್ವಾಮಿ ಅವರು ಇಂದು ಇಲ್ಲಿ ತಿಳಿಸಿದರು.

ಮೈಸೂರಿನ ಊಟಿ ರಸ್ತೆ ಜೆಎಸ್‌ಎಸ್ ಕಾಲೇಜಿನ ಹಿಂದಿ ವಿಭಾಗ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಯಾವುದೇ ಭಾಷೆಯ ಸತ್ವ ಇರುವುದು ಅದರ ಕೊಳುಕೊಡುಗೆಯಲಿ ; ಹಿಂದಿ ಭಾಷೆಯು ಜಗತ್ತಿನ ನಾನಾ ಭಾಷೆಗಳಿಂದ ಸ್ವೀಕಾರವನ್ನೂ ಪಡೆದಿದೆ, ಅಂತೆಯೇ ಅನೇಕ ಭಾಷೆಗಳ ಮೇಲೆ ತನ್ನ ಪ್ರಭಾವವನ್ನೂ ಬೀರಿದೆ. ಭಾವನಾತ್ಮಕ ಸಂಬಂಧ ಬೆಸೆಯುವಲ್ಲಿ ಹಿಂದಿಯ ಪಾತ್ರ ಬಹಳ ಪ್ರಮುಖವಾದುದು. ಅಂತಹ ಸಾಮರ್ಥ್ಯ ಹಿಂದಿಗಿದೆ ಎಂದರು.

ಅನುವಾದವು ಪರಸ್ಪರರು ಸಂಸ್ಕೃತಿಗಳನ್ನು ಪರಿಚಯ ಮಾಡಿಕೊಳ್ಳಲು ಸಹಾಯಕಾರಿಯಾಗಿದೆ. ಕನ್ನಡದ ಕುವೆಂಪು ಮೊದಲಾದ ಸಾಹಿತಿಗಳ ಕೃತಿಗಳನ್ನು ಹಿಂದಿಗೆ ಅನುವಾದಿಸುವ ಮೂಲಕ ಇಲ್ಲಿನ ಸಂಸ್ಕೃತಿಯನ್ನು, ಸಾಹಿತ್ಯವನ್ನು ಹಿಂದಿ ಬಲ್ಲ ಅನೇಕ ಮಂದಿಗೆ ತಲುಪಿಸಿದಂತಾಗುತ್ತದೆ. ಭಾಷೆ ಭಾಷೆಗಳ ನಡುವೆ ಈ ತರಹದ ಅನುವಾದದಿಂದ ಬೇರೆ ಬೇರೆ ಸಾಹಿತ್ಯದ ಸಂಸ್ಕೃತಿಯ ಅರಿವು ಉಂಟಾಗುತ್ತದೆ ಎಂದು ಅವರು ತಿಳಿಸಿದರು. ಮುಂದುವರಿದು ಮಾತನಾಡಿದ ಅವರು ಹಿಂದಿ ಭಾಷೆಯ ಕಲಿಕೆಯಿಂದ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಏಕತೆಯನ್ನು ಹೊಂದಬಹುದಾಗಿದೆ ಎಂದು ತಿಳಿಸಿದರು.

ಹಿಂದಿ ವಿಭಾಗದ ಮುಖ್ಯಸ್ಥರಾದ ಎಂ. ಆರ್ ಸಿದ್ದಗಂಗಮ್ಮ ಅವರು ಸ್ವಾಗತ ಕೋರಿದರು. ವಿದ್ಯಾರ್ಥಿ ಸಂತೋಷ್ ಅವರು ಪ್ರಾರ್ಥನೆ ಸಲ್ಲಿಸಿದರು. ನಿವೃತ್ತ ಹಿಂದಿ ಉಪನ್ಯಾಸಕರಾದ ಡಾ. ಕುಮಾರ್, ಸಂಸ್ಕೃತ ವಿಭಾಗದ ಪ್ರೊ. ವಿಶ್ವನಾಥ್ ಮತ್ತು ಇಂಗ್ಲಿಷ್ ವಿಭಾಗದ ವಸುಮತಿಯವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ಪ್ರಾಂಶುಪಾಲರು
ಪ್ರಾಚಾರ್ಯರು
ಜೆ. ಎಸ್. ಎಸ್. ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಊಟಿ ರಸ್ತೆ, ಮೈಸೂರು–570 004

ಗೆ,
ಸಂಪಾದಕರು